..

**ಓ ಎಸ್ ನಂಃ 41-14** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ಎಸ್ ಎಸ್ ಬಿ ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.ವಾದಿ ಕೊಟ್ಟಂತಹ ಜಿ ಪಿ ಎ ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ದಿಃ 20.3.2013 ರಂದು ಪ್ರತಿವಾದಿಯರು ವಾದಿಯರಿಗೆ ಬರೆದುಕೊಟ್ಟಂತಹ ಕ್ರಯ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ.2 ಎಂದು, ಡೀಡ್ ಆಫ ರಿವೋಕೇಶನ್ ಆಫ್ ಪಾವರ್ ಆಫ್ ಅಟಾರ್ನಿ ಹಾಜರಪಡಿಸಿದ್ದು ಅದನ್ನು ನಿಪಿ.3 ಎಂದು, ದಿಃ 27.9.2013 ರ ಖರೀದಿ ಪತ್ರದ ರದ್ದತಿ ಪತ್ರ ದೃಢೀಕೃತ ನಕಲನ್ನು ಅದನ್ನು ನಿಪಿ.4 ಎಂದು, ದಿಃ 28.9.2013 ರಂದು ಪೋಲಿಸರು ಕೊಟ್ಟಂತಹ ಹಿಂಬರಹ ನಿಪಿ.5 ಎಂದು, ಸದರಿ ಇನ್ನೊಂದು ಪೋಲಿಸರು ಕೊಟ್ಟಂತಹ ಹಿಂಬರಹ ನಿಪಿ.6 ಎಂದು, ಪಹಣಿ ಪತ್ರಿಕೆ ನಿಪಿ.7 ಎಂದು ಕ್ರಮವಾಗಿ ಗುರುತಿಸಲಾಯಿತು.

**ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 22-18** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಮಿಸ್ ವಿ ವಿ ಎಸ್ ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ.1 ಎಂದು, ಟ್ಯಾಕ್ಸ ಅಸೆಸ್ಮೆಂಟ್ ಎಕ್ಸಟ್ರಾಕ್ಟ ನಿಪಿ.2 ಎಂದು, ಹಕ್ಕು ಬಿಟ್ಟ ಪತ್ರ ಮೂಲ ಪ್ರತಿ ನಿಪಿ.3 ಎಂದು, ಸಾರ್ವಜನಿಕರಿಗೆ ಕೊಟ್ಟಂತಹ ದಿನಪತ್ರಿಕೆ ಪ್ರತಿ ನಿಪಿ.4 ಎಂದು ಕ್ರಮವಾಗಿ ಗುರುತಿಸಲಾಯಿತು.

**ಪ್ರತಿವಾದಿಯರು ಏಕತರ್ಫಿಯರಾಗಿ ಉಳಿದಿದ್ದು ಅವರ ಪರ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 321-14** **ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ ಎಂ ಸಿ ವಕೀಲರಿಂದ ಪ್ರತಿವಾದಿ -1 ಪರವಾಗಿಃ-**

..3.. ಒಂದನೇ ಪ್ರತಿವಾದಿ ನನ್ನ ತಮ್ಮ. ನನ್ನ ಅಕ್ಕತಂಗಿಯರು 4 ಜನ. ಅಣ್ಣ-ತಮ್ಮದಿರರ ಪೈಕಿ 2 ಜನ ಇದ್ದರು ಆ ಪೈಕಿ ಒಬ್ಬ ಮರಣ ಹೊಂದಿದ್ದಾನೆ. ನನ್ನ ತಂದೆಗೆ ಎಷ್ಟು ಜನ ಮಕ್ಕಳು ಇದ್ದರೆಂದು ಕಾಣಿಸಿಲ್ಲವೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಯಾವಾಗ ಮರಣ ಹೊಂದಿದರು ಎಂದು ಗೊತ್ತಿಲ್ಲ. ನನ್ನ ಮದುವೆ ಯಾವಾಗ ಆಯಿತೆಂದು ನನಗೆ ಗೊತ್ತಿಲ್ಲ. ನಾನು ಯಾವಾಗ ಹುಟ್ಟಿದೆ ಎಂದು ನನಗೆ ಗೊತ್ತಿಲ್ಲ. ನನಗೆ ವಯಸ್ಸು 100 ರ ಹತ್ತಿರ ಇದೆ. ಕಂಟ್ಟೆಪ್ಪಗೆ ಎಷ್ಟು ಜನ ಮಕ್ಕಳೆಂದರೆ ಒಬ್ಬ ಮಗ.

..4.. ನನ್ನ ತಂದೆಗೆ ಒಟ್ಟು 8 ಎಕರೆ ಆಸ್ತಿ ಇತ್ತು. ಅದನ್ನು ಹೊರತುಪಡಿಸಿ ಬೇರೆ ಮನೆ, ಆಸ್ತಿ ಇಲ್ಲ. ನನ್ನ ತಂದೆಗೆ ಗೋಪನಕೊಪ್ಪದಲ್ಲಿ ವಾಸವಾಗಿದ್ದರು. ಆತ ಮನೆ ಜಾಗ ಮಾರಾಟ ಮಾಡಿ ಹೋಗಿದ್ದಾನೆ.

**ಹೆಚ್ಚಿನ ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಓ ಎಸ್ ನಂಃ 138-16** **ಪಿಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ ಬಿ ಎಸ್ ವಕೀಲರಿಂದ ಎದುರುದಾರರ ಪರವಾಗಿಃ-**

.ನಾನು ಕೆಲಸದಿಂದ ನಿವೃತ್ತಿಯಾಗಿ 5 ವರ್ಷಗಳಾಗಿರುತ್ತದೆ. ವಾದಿ ಕಳೆದ 8-10 ವರ್ಷಗಳಿಂದ ಗೊತ್ತು. ಅದಕ್ಕೂ ಮೊದಲೂ ನನಗೆಪರಿಚಯ ಇರಲಿಲ್ಲ. 3 ನೇ ಪ್ರತಿವಾದಿ ನನ್ನ ಅಕ್ಕ. 1 ನೇ ಪ್ರತಿವಾದಿ ನನ್ನ ಅಕ್ಕನ ಗಂಡನ ಅಣ್ಣ. ಸದರಿಯವರು ಹತ್ತಿರದ ಸಂಬಂಧಿರಾಗಿದ್ದರಿಂದ ಅವರ ಮನೆಗೆ ಹೋಗುವುದು, ಅವರ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೆ ಎಂದರೆ ಸರಿಯಲ್ಲ. ರಮೇಶಗೌಡ ಎಂಬುವವರು ಖರೀದಿ ಮಾಡಿದ್ದಾರೆಂದು ಆಜುಬಾಜುದವರು ಹೇಳುತ್ತಿದ್ದರು. ಸದರಿ ವಾದಿ ಖರೀದಿ ಮಾಡುವ ಸಂದರ್ಬದಲ್ಲಿ ಉಪ-ನೋಂದಣಿ ಕಚೇರಿಯಲ್ಲಿ ನಾನು ಹಾಜರ ಇರಲಿಲ್ಲ. ಅವರು ಖರೀದಿ ಮಾಡಿದ ಬಗ್ಗೆ ಅಕ್ಕ-ಪಕ್ಕದವರು ಹೇಳುತ್ತಿದ್ದರು. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತು.ದಾವಾ ಆಸ್ತಿಯ ಪೂರ್ವಕ್ಕೆ ಃಅಬ್ದುಲ್ ಖಾದರವರ ಆಸ್ತಿ. ಅದರ ಸಂಖ್ಯೆಃ ಸಿಟಿಎಸ್ ನಂಃ 1530, ಪಶ್ಚಿಮಕ್ಕೆ ಮನೆಗಳಿವೆ ಅದರ ಸಂಖ್ಯೆ ಗೊತ್ತಿಲ್ಲ ಉತ್ತರಕ್ಕೆಃ ರಸ್ತೆ ಇದೆ. ದಕ್ಷಿಣಕ್ಕೆಃ ನನ್ನ ಮನೆ ಇದೆ. ಸದರಿ ದಾವಾ ಆಸ್ತಿಯ ಮೂಲ ಮಾಲಿಕರು ಯಾರೆಂದರೆ ಅದು ಭೂ - ಭಾಡಿಗೆ ಆಸ್ತಿ ಎಂದು ನುಡಿಯುತ್ತಾನೆ. ಹಾಜಿಖಾನ ಎಂಬುವವರು ಅಲ್ಲಿ ವಾಸವಾಗಿದ್ದರು. ಆ ಆಸ್ತಿಯ ಮೂಲ ಮಾಲಿಕರು ಬಿ - ಲಕ್ಷ್ಮಣಸಾ ದತ್ತಾತ್ರೆಯ ಎಂಬುವವರು ಇದ್ದರು.ಅವರು ಹಾಜಿಖಾನ್‌ಗೆ ಲೀಜ್ ಮೇಲೆ ಕೊಟ್ಟಿದ್ದು. ಸದರಿ ಹಾಜಿಖಾನ್ ತನ್ನ ಮಕ್ಕಳಿಗೆ ಭಾಗ ಮಾಡಿ ಕೊಟ್ಟಿದ್ದು ಗೊತ್ತಿಲ್ಲ ಆದರೆ 3 ಮಕ್ಕಳಿಗೆ ಮನೆ ಮಾಡಿ ಕೊಟ್ಟಿದ್ದರು. 3 ನೇ ಪ್ರತಿವಾದಿ ಅದೇ ಮನೆಯಲ್ಲಿ ವಾಸವಾಗಿದ್ದರು. 1971 ರಲ್ಲಿ 3 ನೇ ಪ್ರತಿವಾದಿ ಮನೆ ಮದುವೆಯಾಗಿತ್ತು ಅಲ್ಲಿಯೇ ಆಕೆ ವಾಸವಾಗಿದ್ದಾಳೆ.

..2.. 1 ನೇ ಪ್ರತಿವಾದಿ ಹಾಗೂ ಆಕೆ ತಾಯಿ 1991 ರಲ್ಲಿ ದಾವೆ ಹಾಕಿದ್ದು ಗೊತ್ತು. ಸದರಿ ದಾವೆಯನ್ನು 3 ನೇ ಪ್ರತಿವಾದಿ ಯ ವಿರುದ್ಧ ಸಲ್ಲಿಸಿ ಮಗ ಮರಣ ಹೊಂದಿದ್ದಾನೆ ಇಲ್ಲಿ ಏಕೆ ಇರುತ್ತಿ ಮನೆಯಿಂದ ಹೊರಗೆ ಹೋಗು ಎಂದು ಸಲ್ಲಿಸಿದ್ದ. ಸದರಿ ಪ್ರಕರಣದಲ್ಲಿ ಆ ಜಮೀನಿನಲ್ಲಿ ಯಾರು ವಾಸವಾಗಿದ್ದರೋ ಅವರೇ ಮಾಲಿಕರೆಂದು ತೀರ್ಮಾನವಾಯಿತು. ರಜಿಯಾಬೇಗಂ 1990 ರಲ್ಲಿ ಮೇಲ್ಮನವಿ ಸಲ್ಲಿಸಿದ್ದರೆಂದರೆ ಹೌದು.

ಅದರ ಸಂಖ್ಯೆ ನನಗೆ ಹೇಳಲು ನನಗೆ ನೆನಪಿಲ್ಲ. ಸದರಿ ಪ್ರಕರಣ ಸದರಿ ಆರ್ ಎ 12-1999 ಪ್ರಕರಣ ಚಾಲ್ತಿಯಲ್ಲಿದ್ದಾಗ ವಾದಿಯರಿಗೆ ನೂರಜಹಾನ್ ಎಂಬುವವರು ದಾವಾ ಆಸ್ತಿ ಮಾರಾಟ ಮಾಡಿದ್ದರೆಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ತನಿಖೆ ಇದ್ದಾಗ 1 ನೇ ಪ್ರತಿವಾದಿಯ ತಾಯಿ ಮರಣ ಹೊಂದಿದ್ದಳೆಂದರೆ ಹೌದು. ಸದರಿ ಪ್ರಕರಣದಲ್ಲಿ ಆ ದಾವಾ ಆಸ್ತಿಯಲ್ಲಿ 4 ಭಾಗದ ಬದಲು 3 ಭಾಗವನ್ನು ಮಾಡಿ ತೀರ್ಮಾನವಾಯಿತೆಂದರೆ ಹೌದು. ಸದರಿ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಛನ್ಯಾಯಾಲಯದಲ್ಲಿ ನೂರಜಹಾನ್ ಹಾಗೂ ಇತರರು ಸೇರಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಹೌದು. ಆ ಮೇಲ್ಮನವಿ ಸಂಖ್ಯೆಃ 314 ಇರುತ್ತದೆ. ಸದರಿ ಪ್ರಕರಣ ಚಾಲ್ತಿಯಲ್ಲಿದ್ದಾಗ ಮಾರಾಟ ಮಾಡಿದ್ದು ಗೊತ್ತಿದ್ದರೂ ಸಹ ಈ ಪ್ರಕರಣದಲ್ಲಿ ವಾದಿಯರಿಗೆ ಹಾಗೂ ನೂರಜಹಾನ್ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಬೇರೆ ಬೇರೆ ಪ್ರಕರಣಗಳಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆಂದರೆ ನನ್ನ ಅಕ್ಕನ ಪ್ರಕರಣದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆಂದು ನುಡಿಯುತ್ತಾನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**G & W ನಂಃ 14-18** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ಅರ್ಜಿದಾರ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ಆರ್ ಜಿ ಬಿ ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.ದಿಃ 23.11.2007 ರ ಖರೀದಿ ಪತ್ರದ ದೃಢೀಕೃತ ನಕಲು ನಿಪಿ.1 ಎಂದು, ಎರಡು ಪಹಣಿ ಪತ್ರಿಕೆ ನಿಪಿ.2 ಹಾಗೂ 3 ಎಂದು, ನನ್ನ ಮಗನ ಜನನ ಪ್ರಮಾಣ ಪತ್ರ ನಿಪಿ.4 ಎಂದು ಕ್ರಮವಾಗಿ ಗುರುತಿಸಲಾಯಿತು.

**ಎದುರುದಾರರು ಯಾರು ಇರುವುದಿಲ್ಲ ಮತ್ತು ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**p and sc ನಂಃ 1-18** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ಅರ್ಜಿದಾರ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಹೆಚ್ಚಿನ ಮುಖ್ಯ ವಿಚಾರಣೆಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 2-16** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ AAK ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.ವಾದಿಯರು ಮಾಡಿಕೊಟ್ಟಂತಹ ಜಿ ಪಿ ಎ ನೋಂದಾಯಿತ ಪ್ರತಿಯನ್ನು ನಿಪಿ.1 ಎಂದು, 3 ಪಹಣಿ ಪತ್ರಿಕೆಗಳನ್ನು ನಿಪಿ.2 ರಿಂದ 4 ಎಂದು ಕ್ರಮವಾಗಿ ಗುರುತಿಸಲಾಯಿತು.

**ಪಾಟಿ ಸವಾಲಿಗಾಗಿ ವೇಳೆ ಕೇಳಿದ್ದರಿಂದ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 6-17** **ಪಿಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಐ ಡಿ ಜೆ ವಕೀಲರಿಂದ ಎದುರುದಾರರ ಪರವಾಗಿಃ-**

..2.. ನನ್ನ ಅಜ್ಜನ ಹೆಸರು ರಜಾಕಸಾಬ. ಸಿಟಿಎಸ್ 681 ಆಸ್ತಿ ನಮ್ಮ ಅಜ್ಜನಿಂದ ಬಂದಿದ್ದು ಎಂದರೆ ಹೌದು. ನನ್ನ ಅಜ್ಜನಿಗೆ ಒಬ್ಬಳು ಹೆಂಡತಿ. ಆಕೆಯ ಹೆಸರು ಪೀರಸಾಬಿ ಎಂದು. ಹಾಫಿಜಸಾಬ ನಮ್ಮ ದೊಡ್ಡಪ್ಪ. ಪ್ರತಿವಾದಿ 1 ರಿಂದ 3 ರವರು ಹಾಪಿಜಸಾಬನ ಮಕ್ಕಳು. ಹಾಪಿಜಸಾಬನ ತಾಯಿ ಪೀರಸಾಬಿ ಎಂದು. ಸದರಿ ರಜಾಕಸಾಬನ ಮೊದಲನೇ ಹೆಂಡತಿಯ ಮಗ ಹಾಫಿಜಸಾಬ ಎಂದರೆ ಸರಿಯಲ್ಲ. 1 ನೇ ವಾದಿ ಇದ್ದಾನೆ ಆತನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಬಂದು ತೊಂದರೆ ಇಲ್ಲವೆಂದು ಸಾಕ್ಷಿ ತೊಂದರೆ ಇದೆ ಆತನಿಗೆ ಪಾರ್ಶ್ವವಾಯು ಕಾಯಿಲೆ ಇದೆ ಎಂದು ನುಡಿಯುತ್ತಾನೆ. ಆ ಕಾಯಿಲೆ ಆಗಿ ಆತನಿಗೆ 2-3 ವರ್ಷಗಳಾಯಿತು. ಅದು ಆತನ ಬಾಯಿಗೆ ಹೊಡೆದಿದ್ದರಿಂದ ಮಾತನಾಡಲು ಬರುವುದಿಲ್ಲ. ಆತನಿಗೆ ಕಿರವತ್ತಿ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ. ಆ ರೀತಿ 1 ನೇ ವಾದಿಗೆ ಕಾಯಿಲೆ ಇದೆ ಮತ್ತು ಚಿಕಿತ್ಸೆ ಕೊಡಿಸುತ್ತಿದ್ದೇವೆ ಎಂದು ತೋರಿಸಲು ದಾಖಲೆ ಇಲ್ಲ.

..3.. ಈ ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಮ್ಮ ಕಾಕಾನಾದ ಗಫಾರಸಾಬರಿಂದ ಮಾಹಿತಿ ಪಡೆದು ಕೊಟ್ಟಿದ್ದೇನೆ. ಗಫಾರಸಾಬ ಈ ದಾವೆ ಸಲ್ಲಿಸಲು ನ್ಯಾಯಾಲಯಕ್ಕೆ ಯಾವಾಗಲೂ ಬಂದಿಲ್ಲ. ಸದರಿ ಗಪಾರಸಾಬನಿಂದ ಮಾಹಿತಿ ಪಡೆದು ಸಲ್ಲಿಸಿದ್ದೇನೆಂದು ತೋರಿಸಲು ಆತನಿಂದ ಯಾವುದೇ ಅಧಿಕಾರ ಪಡೆದ ಬಗ್ಗೆ ದಾಖಲೆ ಇಲ್ಲ. ವಾದಿ -1 ನನಗೆ ಉರ್ದುವಿನಲ್ಲಿ ಹೇಳಿದ್ದಾನೆ. ನನ್ನ ಕಾಕಾ ಭಾರತ್ ಮಿಲ್‌ದಲ್ಲಿ ಕೆಲಸದಲ್ಲಿದ್ದ ಅದು ಬಂದಾಗಿದ್ದರಿಂದ ಈಗ ಮನೆಯಲ್ಲಿದ್ದಾನೆ. ನಾನು ಕೆ ಎಸ್ ಆರ್ ಟಿ ಸಿ ಟ್ರಾಫಿಕ್ ಕಂಟ್ರೋಲರ್ ಆಗಿ ಕೆಲಸ ಮಾಡುತ್ತಿದ್ದೆ ಈಗ ನಿವೃತ್ತಿ ಹೊಂದಿದ್ದೇನೆ. ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆಂದು ಏನು ಓದಿ ತಿಳಿದುಕೊಂಡಿಲ್ಲ.

**ಹೆಚ್ಚಿನ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಓ ಎಸ್ ನಂಃ 43-16** **ಪಿಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ ಎಲ್ ಎಸ್ ವಕೀಲರಿಂದ ಪ್ರತಿವಾದಿ 1 ರಿಂದ 4 ರ ಪರವಾಗಿಃ-**

...5.. ನಾನು ಬುದ್ರಶಿಂಗಿಯಲ್ಲಿ ಭಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ಆ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ವಾಸವಾಗಿದ್ದೇವೆ. ನನ್ನ ತಾಯಿ ಸಹ ನ್ಯಾಯಾಲಯಕ್ಕೆ ಈ ದಿನ ಬಂದಿದ್ದಾಳೆ. ನನ್ನ ತಂದೆ ಹುಬ್ಬಳ್ಳಿಯಲ್ಲಿದ್ದಾರೆ ಆದರೆ ಎಲ್ಲಿದ್ದಾರೆಂದು ಗೊತ್ತಿಲ್ಲ. ನನ್ನ ತಂದೆಗೆ 2 ಜನ ಮಕ್ಕಳು ಅಂದರೆ ನಾನು ಹಾಗೂ ನನ್ನ ಅಣ್ಣ ಸುನೀಲ ಎಂದು(32 ನೇ ಪ್ರತಿವಾದಿ). ನನ್ನ ಅಣ್ಣ ಸುನಿಲ ಅವನು ಬೇರೆ ವಾಸವಾಗಿದ್ದಾನೆ ಆದರೆ ಎಲ್ಲಿ ವಾಸವಾಗಿದ್ದಾನೆಂದು ಗೊತ್ತಿಲ್ಲ. ಈ ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿದ್ದೇನೆ. ಸದರಿ ಈ ದಾವೆ ಸಲ್ಲಿಸುವಾಗ ನನ್ನ ತಂದೆ 28 ನೇ ಪ್ರತಿವಾದಿ ಮತ್ತು ನನ್ನ ಅಣ್ಣ ಸುನಿಲ ಬುದ್ರಶಿಂಗಿಯಲ್ಲಿ ವಾಸವಾಗಿದ್ದೇವೆಂದು ವಿಳಾಸ ಕೊಟ್ಟಿದ್ದೇವೆಂದರೆ ಹೌದು. ಸದರಿ ನನ್ನ ತಂದೆ ಹಾಗೂ ಅಣ್ಣ ಬುದ್ರಶಿಂಗಿಯಲ್ಲಿ ವಾಸವಾಗಿದ್ದರು ಈಗ ಎಲ್ಲಿದ್ದಾರೆಂದು ಗೊತ್ತಿಲ್ಲ.

..6.. ನಾನು 10 ನೇ ತರಗತಿವರೆಗೆ ಓದಿದ್ದೇನೆ. ನಾನು ಎಸ್ ಎಸ್ ಎಲ್ ಸಿ 2015 ರಲ್ಲಿ ನಾನು ಸಿ ಐ ಸಿ ಶಾಲೆ ಅದರಗುಂಚಿಯಲ್ಲಿ ಮುಗಿಸಿದ್ದೇನೆ. ಆ ಶಾಲೆ ಬುದ್ರಶಿಂಗಿಯಿಂದ 2 ಕಿಮೀದೂರದಲ್ಲಿದೆ. ಆ ಶಾಲೆಗೆ ನಾನು ನಡೆದುಕೊಂಡು ಹೋಗುತ್ತಿದ್ದೆ. ನಾನು ಓದಲು ಖರ್ಚು ವೆಚ್ಚಗಳೆನ್ನೆಲ್ಲಾ ನನ್ನ ತಂದೆ ನೋಡಿಕೊಳ್ಳುತ್ತಿದ್ದರೆಂದರೆ ಸರಿಯಲ್ಲ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. ನಮ್ಮ ಮನೆಯ ಜವಾಬ್ದಾರಿಯನ್ನು ನನ್ನ ತಾಯಿ ನೋಡಿಕೊಳ್ಳುತ್ತಾಳೆ. ಮನೆಯ ಖರ್ಚು ವೆಚ್ಚ ನಿಭಾಯಿಸಲು ನನ್ನ ತಾಯಿಗೆ ಹಣ ಹೊಲದಲ್ಲಿ ದುಡಿಯುತ್ತಿದ್ದರಿಂದ ಬರುತ್ತಿದೆ. ಸದರಿ ನಮ್ಮ ತಂದೆ ಹಾಗೂ ನಮ್ಮ ತಾಯಿ 2 ವರ್ಷಗಳ ಹಿಂದೆ ಕೂಡಿಯೇ ಇರುತ್ತಿದ್ದರು ಆದರೆ ಹೊಲ ಮನೆ ಸಲುವಾಗಿ ಜಗಳ ಬಂದು ಈಗ ಬೇರೆ ಇದ್ದಾಳೆ. ನನ್ನ ಅಣ್ಣನಿಗೆ ಹಾಗೂ ನಮ್ಮತಾಯಿಗೆ ಜಗಳವಿಲ್ಲ. ನನ್ನ ಅಣ್ಣ ನಮ್ಮ ಮನೆಗೆ ಯಾವಾಗಲಾದರೊಮ್ಮೆ ಬಂದು ಹೋಗುತ್ತಾನೆ. ಈ ದಾವೆ ಸಲ್ಲಿಸುವಾಗ ನಾನು ನನ್ನ ತಾಯಿ, ತಂದೆ ಹಾಗೂ ಅಣ್ಣನನ್ನುವಿಚಾರಿಸಿ ಹಾಕಿಲ್ಲ ಆದರೆ ನನ್ನ ತಾಯಿಯನ್ನು ವಿಚಾರಿಸಿ ಸಲ್ಲಿಸಿದ್ದೇನೆಂದು ನುಡಿಯುತ್ತಾನೆ. ನನ್ನ ತಾಯಿ ಸರೋಜಾಳ ನ್ನು ಈ ದಾವೆಯಲ್ಲಿ ಪಕ್ಷಕಾರಳನ್ನಾಗಿ ಮಾಡಿಲ್ಲ.

ಈ ದಾವೆ ಸಲ್ಲಿಸಲು ಎಲ್ಲಾ ದಾಖಲೆಗಳನ್ನು ನನ್ನ ತಾಯಿ ತೆಗೆಸಿ ಕೊಟ್ಟಿದ್ದಾಳೆ. ಅದೇ ರೀತಿ ದಾವೆ ಸಲ್ಲಿಸಲು ಖರ್ಚು ವೆಚ್ಚಗಳೆನ್ನೆಲ್ಲಾ ನನ್ನ ತಾಯಿ ಕೊಟ್ಟಿದ್ದಾಳೆ. ಈ ದಾವೆ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ನಮ್ಮ ವಕೀಲರು ನನಗೆ ಓದಿ ಹೇಳಿದ್ದಾರೆ. 2 ವರ್ಷಗಳ ಹಿಂದೆ ನನ್ನ ತಾಯಿ ಹಾಗೂ ನನ್ನ ತಂದೆ ಒಟ್ಟಿಗೆ ಇದ್ದಾಗ ಮನೆ ಜವಾಬ್ದಾರಿಯನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ ಆತನಿಗೆ ಕಾಯಿಲೆ ಇತ್ತು ಹಾಗಾಗಿ ನನ್ನ ತಾಯಿ ನೋಡಿಕೊಳ್ಳುತ್ತಿದ್ದಳು. ನನ್ನ ತಂದೆಗೆ ಪಾರ್ಶುವಾಯು ಹೊಡೆದಿದೆ. ಈಗ ನನ್ನ ತಂದೆ ಪಾರ್ಶುವಾಯು ಗುಣವಾಗಿದೆ. ನನ್ನ ತಂದೆಗೆ ಚಿಕಿತ್ಸೆಯನ್ನು ನಾನು ಹಾಗೂ ನನ್ನ ತಾಯಿ ಸೇರಿ ಬೆಳಗಾವಿಯ ಸಂಗೋಳ್ಳಿ ಗ್ರಾಮದಲ್ಲಿ ಚಿಕಿತ್ಸೆ ಕೊಡಿಸಿದ್ದೇವೆ. ಈಗ ನನ್ನ ತಂದೆ ಬುದ್ರಶಿಂಗಿಯಲ್ಲಿ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ನನ್ನ ತಂದೆಯ ಮನೆಗೆ ನಾನು ಹಾಗೂ ನಮ್ಮ ತಾಯಿ ಹೋಗಿ ಬಂದು ಮಾಡುವುದಿಲ್ಲ.

..7.. ನನ್ನ ಅಜ್ಜಗೆ ಬಸಪ್ಪನಿಗೆ 4 ಜನ ಮಕ್ಕಳು. ಅಂದರೆ ಪ್ರತಿವಾದಿ 28 ರಿಂದ 31 ರವರು ಇರುತ್ತಾರೆ. ನನ್ನ ತಂದೆಯ ಸಹೋದರಿಯರು ಇಲ್ಲಿಯವರೆಗೂ ದಾವಾ ಆಸ್ತಿಯಲ್ಲಿ ದಾವಾ ಬೇಕೆಂದು ಎಲ್ಲಿಯೂ ಯಾವುದೇ ಪ್ರಕರಣ ದಾಖಲು ಮಾಡಿಲ್ಲವೆಂದರೆ ಹೌದು. ಪ್ರತಿವಾದಿ 29 ರಿಂದ 31 ರವರು ನಮ್ಮ ಜೊತೆಗೆ ಮನಸಾ ಮನಸಾ ಮಾತನಾಡುತ್ತಾರೆ. ನನ್ನ ತಂದೆಯ ಸಹೋದರಿಯರೊಂದಿಗೆ ಈ ದಾವೆ ಸಲ್ಲಿಸುವ ಮೊದಲು ಅವರನ್ನು ವಿಚಾರಿಸಿದ್ದೇನೆ. ನನ್ನ ತಂದೆಯ ಸಹೋದರಿಯರಾದ ಪ್ರತಿವಾದಿ 29 ರಿಂದ 31 ರವರನ್ನು ನಾನು ಕೇಳಿದಾಗ ಅವರು ಸಹ ತಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದು ಹೇಳಿದ್ದಾರೆ. ಸದರಿ ಈ ದಾವೆಯ ದಾವಾ ಆಸ್ತಿಯ ಉತಾರದಲ್ಲಿ ನನ್ನ ತಂದೆ ಹಾಗೂ ಅವರ ಸಹೋದರಿಯರ ಹೆಸರು ಇತ್ತು. ಸದರಿ ಸಾಕ್ಷಿಗೆ ನಿಪಿ.1 ರಿಂದ 3 ನ್ನು ತೋರಿಸಿ ಕೇಳಲಾಗಿ ಆ ದಾಖಲೆಗಳಲ್ಲಿ ನನ್ನ ತಂದೆ ಹಾಗೂ ತಂದೆಯ ಸಹೋದರಿಯರ ಹೆಸರು ಇಲ್ಲವೆಂದು ನುಡಿಯುತ್ತಾನೆ. ಸದರಿ ದಾವಾ ಎ-ಶೆಡ್ಯೂಲ್ ಐಟೇಮ ನಂಃ 1 ರಿಂದ 3 ಸರ್ವೆ ನಂಬರ ಆಸ್ತಿಗಳಲ್ಲಿ ಉತಾರದಲ್ಲಿ ಕಾಣಿಸಿದಂತಹ ವೀರಭದ್ರಪ್ಪ ಹೊಸೂರ ನ ಮಕ್ಕಳು ಆ ಆಸ್ತಿಗಳಲ್ಲಿ ಕಬ್ಜಾ ಇದ್ದಾರೆಂದರೆ ಹೌದು. ಅದೇ ರೀತಿ ಮನೆಯ ಉತಾರ ನಿಪಿ.4 ರಿಂದ 6 ರಲ್ಲಿಯೂ ಸಹ ನಮ್ಮ ತಂದೆಯ ಸಹೋದರಿಯರ ಹೆಸರಿಲ್ಲವೆಂದರೆ ಹೌದು. ಸದರಿ ಮನೆಯ ಆಸ್ತಿಗಳಲ್ಲಿಯೂ ಸಹ ವೀರಭದ್ರಪ್ಪರವರ ವಾರಸುದಾರವರೇ ವಾಸವಾಗಿದ್ದಾರೆಂದರೆ ಹೌದು. ಸದರಿ ವೀರಭದ್ರಪ್ಪರವರ ವಾರಸುದಾರರು ವಾಸವಾಗಿರುವಂತಹ ಈ ಮೇಲೆ ಹೇಳಿದ ಮನೆಗಳಿಗೆ ನಾನು, ನನ್ನ ತಂದೆ - ತಾಯಿ ಮತ್ತು ನನ್ನ ಅಣ್ಣ ಹೋಗಿ ಬಂದು ಮಾಡುವುದಿಲ್ಲ.

**ಓ ಎಸ್ ನಂಃ 43-16** **ಪಿಡಬ್ಲ್ಯೂ - 1**

..8.. ನನ್ನ ಅಜ್ಜ ಬಸಪ್ಪ ಮರಣ ಹೊಂದಿದಾಗ ನಾನು ಜನಿಸಿರಲಿಲ್ಲ. ನನ್ನ ಅಜ್ಜ ಬಸಪ್ಪ ಅಸಲು ದಾವೆ ನಂಃ 24-1952 ಯಾವ ಕಾರಣಕ್ಕಾಗಿ ಸಲ್ಲಿಸಿದ್ದ ಎಂದರೆ ನನಗೆ ನೆನಪಿಲ್ಲ. ಆ ದಾವೆ ತೀರ್ಪಿನ ಪ್ರತಿಯನ್ನು ಈ ದಾವೆಯಲ್ಲಿ ಹಾಜರಪಡಿಸಿರಬೇಕೆಂದು ಸಾಕ್ಷಿ ನುಡಿಯುತ್ತಾನೆ. ಸದರಿ ನನ್ನ ಅಜ್ಜ ಬಸಪ್ಪ ಅಸಲು ದಾವೆ 24ಃ1952 ರಲ್ಲಿ 3 ಮನೆಗಳ ಆಸ್ತಿಗಳಿಗೆ ಸಂಬಂಧಪಟ್ಟಂತೆ ಅಂದರೆ ಸಿಟಿಎಸ್ 2220, 2099 ಮತ್ತು 2254 ಆಸ್ತಿಗಳಲ್ಲಿ ಭಾಗ ಬೇಕೆಂದು ಕೇಳಿದ್ದ. ಅದೇ ರೀತಿ ಹೊಲದ ಆಸ್ತಿಗಳು ಬೇಕೆಂದು ಕೇಳಿದ್ದ. ಅದೇ ರೀತಿ ಹೊಲದ ಆಸ್ತಿಗಳಲ್ಲೂ ಸಹ ನನ್ನ ಅಜ್ಜ ಈ ಮೇಲೆ ಹೇಳಿದ ದಾವೆಯಲ್ಲಿ ಭಾಗ ಕೇಳಿದ್ದ ಅವೆಂದರೆ ಸರ್ವೆ ನಂಃ 188ಃ2 ಎ, 229ಃ1 ಎ, 145ಃ1 ಎ ಆಸ್ತಿಗಳಲ್ಲಿ ಕೇಳಿದ್ದ. ಆ ದಾವೆ ನನ್ನ ಅಜ್ಜನ ವಿರುದ್ಧವಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ 415-** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

..

**ಓ ಎಸ್ ನಂಃ** **ಪಿಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕಃ 02.07.2018 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.

**ಶ್ರೀ ....ವಕೀಲರಿಂದ ಅನುಮತಿ ಮೇರೆಗೆ ಹೆಚ್ಚಿನ ಮುಖ್ಯ ವಿಚಾರಣೆಃ-**

.

ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .....ವಕೀಲರಿಂದ ಎದುರುದಾರರ ಪರವಾಗಿಃ-**

.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**

**ಒಂದನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ.**

OS No. PW-

| | | |
|---|---|---|
| ಸಾಕ್ಷಿದಾರನ ಹೆಸರು | : | |
| ತಂದೆಯ ಹೆಸರು | : | |
| ವಯಸ್ಸು | : | ವರ್ಷ |
| ಉದ್ಯೋಗ | : | |
| ವಾಸ್ತವ್ಯ | : | |

ಸಾಕ್ಷಿಯನ್ನು ಈ ದಿನ ದಿನಾಂಕ 02.07.2018 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ :- ಶ್ರೀ ವಕೀಲರಿಂದ ಪ್ರತಿವಾದಿಯರ ಪರವಾಗಿ:-**

.

**ಪಾಟೀ ಸವಾಲು:- ಶ್ರೀ ವಕೀಲರಿಂದ ವಾದಿಯರ ಪರವಾಗಿ:-**

.

**ಮರು ವಿಚಾರಣೆ**:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸ. ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹುಬ್ಬಳ್ಳಿ.